# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಶಂಭುದೇವರ ಕೆರೆ ತುಂಬಿಸುವ ಯೋಜನೆಯ ವಿವರವಾದ ಯೋಜನಾ ವರದಿಗೆ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 76 ಎನ್‌ಹೆಚ್‌ಪಿ 2017, ದಿನಾಂಕ:26-06-2018.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂ.ಸ-3/748/2018-19/3490, ದಿನಾಂಕ:16-01-2019.

*ಪ್ರಸ್ತಾವನೆ :-*

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಆನೆಕೆರೆ ಶಂಭುದೇವರ ಕೆರೆಯಿಂದ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನ ಹೋಬಳಿಯ ಆಲಗೊಂಡನಹಳ್ಳಿ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಬರುವ 300 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ 35 ಗ್ರಾಮಗಳ ಕುಡಿಯುವ ನೀರಿನ ಸಲುವಾಗಿ 26 ಕೆರೆಗಳನ್ನು ತುಂಬಿಸುವ ಯೋಜನೆಯ ರೂ.47.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಈ ಯೋಜನೆಯು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

2. ಮೇಲೆ ಓದಲಾದ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಉಲ್ಲೇಖಿತ ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಶಂಭುದೇವರ ಕೆರೆಯ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು, ಈ ಕೆರೆಯಿಂದ ನೀರನ್ನು ಎತ್ತಿದರೆ ತಮ್ಮ ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ಕೊರತೆ ಹಾಗೂ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಮಟ್ಟ ಬಹಳಷ್ಟು ಕಡಿಮೆಯಾಗುವುದರಿಂದ ಈ ಯೋಜನೆಗೆ ತಡೆ ನೀಡಬೇಕೆಂದು ಮಾನ್ಯ ಲೋಕೋಪಯೋಗಿ ಹಾಗೂ ಹಾಸನ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಮನವಿಯನ್ನು ಸಲ್ಲಿಸಿದ್ದು, ನೀರಿನ ಲಭ್ಯತೆಯ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಅಗತ್ಯವಾದ ಪರ್ಯಾಯ ವ್ಯವಸ್ಥೆಯ ಪ್ರಸ್ತಾವನೆಯನ್ನು ನೀಡಲು ಮಾನ್ಯ ಸಚಿವರವರು ಸೂಚಿಸಿರುವುದಾಗಿ ವರದಿ ಮಾಡಿರುತ್ತಾರೆ.

3. ಹಿಂದಿನ ಯೋಜನೆಯ ತಯಾರಿಕಾ ಹಂತದಲ್ಲಿ, ನೀರಿನ ಲಭ್ಯತೆಯನ್ನು ಶೇ 50 ಅವಲಂಬಿತ ಪ್ರಮಾಣಕ್ಕೆ ವಿನ್ಯಾಸಿಸಲಾಗಿತ್ತು (2 ವರ್ಷಕ್ಕೊಮ್ಮೆ ನೀರು ತುಂಬಿಸುವುದು), ಮಾನ್ಯ ಸಚಿವರು ಸೂಚಿಸಿದಂತೆ ನೀರು ಸರಬರಾಜು ಮಾಡಲು ಕನಿಷ್ಠ ಶೇ 75 ಅವಲಂಬಿತ ಪ್ರಮಾಣಕ್ಕೆ ವಿನ್ಯಾಸ ಮಾಡಲಾಗಿದ್ದು, ಅದರಂತೆ ನೀರಿನ ಲಭ್ಯತೆ 45.73 ಎಂಸಿಎಫ್‌ಟಿ ಮಾತ್ರ ದೊರಕುವುದು ಹಾಗೂ ಉಳಿದಂತೆ 177.47 ಎಂಸಿಎಫ್‌ಟಿ ನೀರಿನ ಕೊರತೆಯುಂಟಾಗುವುದು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸತತವಾಗಿ ಹಾಗೂ ಸಮರ್ಪಕವಾಗಿ ಶಂಭುದೇವರ ಕೆರೆಗೆ ನೀರು ಸರಬರಾಜು ಮಾಡುವ ಪ್ರಯುಕ್ತ ವಿವರವಾಗಿ ಸ್ಥಳ ಪರಿಶೀಲನೆ ಹಾಗೂ ಸರ್ವೆ ಮಾಡಿ ರೂ.26.00 ಕೋಟಿಗಳ ವಿವರವಾದ ಯೋಜನಾ ವರದಿಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

4. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಕುಂಬೇನಹಳ್ಳಿ ಗ್ರಾಮದ ಬಳಿ ಹೇಮಾವತಿ ನದಿಯಿಂದ 18 ಕ್ಯೂಸೆಕ್ಸ್ (177.47 ಎಂ.ಸಿ.ಎಫ್‌ಟಿ) ನೀರನ್ನು 5.775 ಕಿ.ಮೀ ಉದ್ದದ ಏರು ಕೊಳವೆ ಮುಖಾಂತರ ಸುಮಾರು 46 ಮೀ ಎತ್ತರಕ್ಕೆ (Static head) ಎತ್ತಿ, ಇಲ್ಲಿಂದ 2.00 ಕಿ.ಮೀ ಉದ್ದ ಗುರುತ್ವಾಕರ್ಷಣೆ (Gravity Main) ಮುಖಾಂತರ ಶಂಭುದೇವರ ಕೆರೆಗೆ ನೀರು ತುಂಬಿಸುವುದಾಗಿದೆ. ಈ ಯೋಜನೆಯನ್ವಯ ಮಳೆಗಾಲದ (Monsoon period) 4 ತಿಂಗಳಲ್ಲಿ (120 ದಿನಗಳ ಕಾಲ ಹಾಗೂ 24 ಗಂಟೆ) ದಿನಂಪ್ರತಿ 18 ಕ್ಯೂಸೆಕ್ಸ್ ನಂತೆ ಒಟ್ಟು 177.47 Mcft ನೀರೆತ್ತಬೇಕಾಗಿರುತ್ತದೆ.

5. <u>ನೀರಿನ ಲಭ್ಯತೆ</u> :- ಆನೆಕೆರೆ ಶಂಭುದೇವರ ಕೆರೆಯ ಒಟ್ಟು catchment area 70.65 ಚ.ಕಿ.ಮೀ. ಗಳಿದ್ದು ಇದರಲ್ಲಿ 57.44 ಚ.ಕಿ.ಮೀ. intercepted catchment ಆಗಿದ್ದು ಉಳಿದಂತೆ 13.21 ಚ.ಕಿ.ಮೀ. independent catchment ಆಗಿರುತ್ತದೆ. 30 ವರ್ಷಗಳ ಮಳೆ ಮಾಪನಾ ಅಂಕಿ ಅಂಶಗಳ ಆಧಾರದ ಮೇಲೆ

75% dependability ಯಂತೆ ಒಟ್ಟು ನೀರಿನ ಲಭ್ಯತೆ 217.23 mcft ಗಳಾಗಿರುತ್ತವೆ ಮತ್ತು ಸದರಿ ವಿಷಯವನ್ನು ದಿನಾಂಕ:10-01-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 66ನೇ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿಯು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

6. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ : ಜಸಂಇ 3 ಎನ್‌ಹೆಚ್‌ಪಿ 2019,**
**ಬೆಂಗಳೂರು, ದಿನಾಂಕ : 01-02-2019**

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಕುಂಬೇನಹಳ್ಳಿ ಗ್ರಾಮದ ಬಳಿ ಹೇಮಾವತಿ ನದಿಯಿಂದ 18 ಕ್ಯೂಸೆಕ್ಸ್ (177.47 ಎಂ.ಸಿ.ಎಫ್‌ಟಿ) ನೀರನ್ನು ಆನೆಕೆರೆ ಶಂಭುದೇವರ ಕೆರೆ ತುಂಬಿಸುವ ಯೋಜನೆಯ ರೂ.26.00 ಕೋಟಿ (ರೂಪಾಯಿ ಇಪ್ಪತ್ತಾರು ಕೋಟಿಗಳು ಮಾತ್ರ) ಗಳ ವಿವರವಾದ ಯೋಜನಾ ವರದಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ACS/FD/524, ದಿನಾಂಕ:29-01-2019, ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-76/2019, ದಿನಾಂಕ:30-01-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.